


ಗುಂಡನ ಮಗಳು: ಮಮ್ಮಿ, ರಾತ್ರಿ ಇಷ್ಟೊತ್ತಾಯ್ತು, ಕರೆಂಟೂ ಇಲ್ಲ, ಅಪ್ಪನಿಗೆ ಭಯ ಆಗಲ್ವ?

ಗುಂಡನ ಪತ್ನಿ: ಇಲ್ಲ, ಅವರದ್ದು ಪೊಲೀಸ್ ಡಿಪಾರ್ಟ್‌ಮೆಂಟು.

ಗುಂಡನ ಮಗಳು: ಯಾರಾದ್ರೂ ಕ್ರಿಮಿನಲ್ಸ್ ಅಟ್ಯಾಕ್ ಮಾಡಿದ್ರೆ, ಏನು ಗತಿ?

ಗುಂಡನ ಪತ್ನಿ: ಅವರ ಹತ್ರ ಪಿಸ್ತೂಲ್ ಇರತ್ತಲ್ಲ, ಹಾಗೇನಾಗಲ್ಲ.

ಗುಂಡನ ಮಗಳು: ನನ್ಗೆ ನಂಬಿಕೆ ಬರ್ತಾ ಇಲ್ಲ.

ಗುಂಡನ ಪತ್ನಿ: ಯಾಕೆ, ಮಗಳೆ?

ಗುಂಡನ ಮಗಳು: ಮತ್ತೆ, ಅಪ್ಪ ನಿನ್ಗೆ ಹೆದರಿ, ನಡುಗ್ತಾರಲ್ಲ?

★★★

ಮರಿ ಗುಂಡ: ಅಮ್ಮಾ, ನನ್ಗೆ ಸೈಕಲ್ ಕೊಡಿಸು.

ಅಮ್ಮ: ದೇವರನ್ನು ಬೇಡಿಕೊ. ನನ್ನಲ್ಲಿ ಅಷ್ಟು ಹಣ ಈಗ ಇಲ್ಲ.

(ಕೆಲದಿನಗಳ ನಂತರ ಮರಿಗುಂಡ ಗಣೇಶ ಮಂದಿರದಲ್ಲಿದ್ದ ಇಲಿಯ ವಿಗ್ರಹವನ್ನು ಮನೆಗೆ ತಂದ.)

ಅಮ್ಮ: ಇದನ್ನ ಏಕೆ ತಂದೆ, ಮನೆಗೆ?

ಮರಿ ಗುಂಡ: ಮತ್ತೆ, ಆ ಗಣೇಶ ಬೇಡ್ಕೊಂಡ್ರೂ ಸೈಕಲ್ ಕೊಡಿಸ್ಲಿಲ್ಲ, ಈಗ ಗೊತ್ತಾಗುತ್ತೆ ಅವನಿಗೆ ಓಡಾಡೋ ಕಷ್ಟ.

★★★

ಗುಂಡನ ಪತ್ನಿ: ಏನ್ರಿ ಬೀಗರೇ, ನಿಮ್ಮ ಮಗಳಿಗೆ ಅಡಿಗೇನೇ ಕಲಿಸಿಲ್ವಲ್ಲ, ಇನ್ನೇನು ಕಲ್ಸಿದೀರಿ?

ಬೀಗಿತ್ತಿ: ಆನ್ ಲೈನ್ ಆರ್ಡರ್ ಮಾಡೋದನ್ನು!

**(ಸಂಗ್ರಹ) ಹಾಡ್ಯ ಬ.ಜಯಾನಂದ, ಮೈಸೂರು**

---

ರೈಲು ಗಾಡಿಯಲ್ಲಿ ಹೀಗೊಂದು ಸೂಚನೆ ಬರೆಯಲಾಗಿತ್ತು. 'ಟಿಕೆಟ್ ರಹಿತ ಪ್ರಯಾಣಿಕರೇ... ಹುಷಾರ್!'

ಟಿಕೆಟ್ ಪಡೆದು ಪ್ರಯಾಣಿಸುತ್ತಿದ್ದ ಗುಂಡ ಅದನ್ನೋದಿ ಅಂದುಕೊಂಡ, 'ಎಲಾ ಇವನಾ.... ಹಾಗಿದ್ದರೆ ನಾವೆಲ್ಲರೂ ದಡ್ಡರೆ..?'

★★★

ಪತ್ನಿ: ರೀ, ಸೋಮವಾರ ಶಾಪಿಂಗ್‌ಗೆ, ಮಂಗಳವಾರ ಹೋಟೆಲಿಗೆ, ಬುಧವಾರ ಸುತ್ತಾಡೋಕೆ, ಗುರುವಾರ ಭೋಜನಕ್ಕೆ, ಶುಕ್ರವಾರ ಪಿಕ್ಚರ್‌ಗೆ, ಶನಿವಾರ ಪಿಕ್ನಿಕ್‌ಗೆ ಹೋದರೆ ಸಖತ್ ಮಜಾ ಅಲ್ವೇನ್ರೀ...?

ಪತಿ: ಹೌದು ಕಣೇ... ಹಾಗೇ ರವಿವಾರ ದೇವಸ್ಥಾನಕ್ಕೆ...

ಪತ್ನಿ: ದೇವಸ್ಥಾನಕ್ಕೆ ಯಾಕ್ರೀ?'

ಪತಿ: ನಂತರದ ವಾರದ ಖರ್ಚಿಗೆ ಭಿಕ್ಷೆ ಎತ್ತಲಿಕ್ಕೆ.

★★★

ಇನ್ ಕಂ ಟ್ಯಾಕ್ಸ್ ಆಫೀಸರ್: ಮೇಡಂ, ವಿವಾಹಿತ ಮಹಿಳೆ ತನ್ನ ಬಳಿ 500 ಗ್ರಾಂ ನಷ್ಟು ಮಾತ್ರ ಚಿನ್ನ ಹೊಂದಿರಬಹುದಾಗಿದೆ. ನಿಮ್ಮಲ್ಲಿ ಒಂದೂವರೆ ಕೆಜಿಯಷ್ಟಿದೆ, ಅದರ ವಿವರ ಕೊಡಿ.

ಸಿನಿಮಾ ನಟಿ: ಇದು ನನ್ನ ಮೂರನೇ ಮದುವೆ. ಪ್ರತೀ ಮದುವೆಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ ತಾನೇ...?

★★★

ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದ ಗುಂಡ ನ್ಯಾಯಾಲಯದ ಕಟಕಟೆಯಲ್ಲಿ ನಿಂತು ನ್ಯಾಯಾಧೀಶರಿಗೆ ಕಾರಣ ತಿಳಿಸಿದ. 'ನಾನು ನನ್ನ ಹೆಂಡತಿಯ ಜೊತೆ ಖುಷಿಯಾಗಿಲ್ಲ ಮೈ ಲಾರ್ಡ್'

ತಕ್ಷಣ ಆತನ ಪತ್ನಿ ಆಕ್ಷೇಪಿಸಿದಳು: 'ವಠಾರದ ಎಲ್ಲಾ ಪುರುಷರೂ ಖುಷಿಯಾಗಿದ್ದಾರೆ, ಇವನೊಬ್ಬನದ್ದೇ ನಖರಾ ಮೈ ಲಾರ್ಡ್...!'

★★★

ಪ್ರಶ್ನೆ: ಸಮಸ್ತ ಸ್ತ್ರೀ ಜಾತಿಯನ್ನು ಕಾಡುವ ಒಂದು ಕುತೂಹಲಕಾರಿ ಪ್ರಶ್ನೆ: 'ಪುರುಷರು ಯಾವುದೇ ರೀತಿಯ ಉಪವಾಸಾದಿ ವ್ರತಗಳನ್ನು ಹಿಡಿಯುವುದಿಲ್ಲ. ಆದರೂ ಅವರಿಗೆ ನಮ್ಮಂಥಾ ಒಳ್ಳೆಯ ಚೆಲುವೆಯರು ಹೇಗೆ ಲಭಿಸುತ್ತಾರೆ..?'

**(ಸಂಗ್ರಹ) ರಮಣ್ ಶೆಟ್ಟಿ ರಂಜಾಳ್, ಮುಂಬೈ**




ಉತ್ತರದಿಂದ ಬಂದಿದ್ದ ಬಾಬಾಗೆ ಅಡ್ಡಬಿದ್ದ...

ಗುಂಡ ದಂಪತಿ: ನಮ್ಮ ಮಕ್ಕಳ ಹೋಂ ವರ್ಕ್ ಮಾಡಿಸಲು ನಮಗೆ ಬುದ್ಧಿ ನೀಡಿ ಬಾಬಾ.

ಬಾಬಾ: ಅದೊಂದು ಬಿಟ್ಟು, ಬೇರೆ ಏನನ್ನಾದರೂ ಕೇಳಿ.

ಗುಂಡ: ಅದೇಕೆ ಬಾಬಾ?

ಬಾಬಾ: ಆ ಕಾರಣಕ್ಕೇ ನಾನು ಸನ್ಯಾಸಿಯಾಗಿದ್ದು.

★★★

ಮೇಡಂ ಮೂರನೇ ಬಾರಿ ಡ್ರೈವಿಂಗ್ ಲೈಸೆನ್ಸ್‌ಗೆ ಇಂಟರ್‌ವ್ಯೂವ್ ನೀಡಲು ಹೋದರು...

ಆಫೀಸರ್: ಒಂದು ಬದಿಯಲ್ಲಿ ಓರ್ವ ನವಯುವಕ ಮತ್ತು ಇನ್ನೊಂದು ಬದಿಯಲ್ಲಿ ಒಬ್ಬಾತ ಮುದುಕ ಎದುರಾದರೆ ನೀವೇನು ಹೊಡೆಯುತ್ತೀರಿ?

ಮೇಡಂ: ಮುದುಕನನ್ನು..

ಆಫೀಸರ್: ಅಯ್ಯೋ ಮೇಡಂ, ಮೂರನೇ ಬಾರಿ ಹೇಳಿ ಕೊಡ್ತಾ ಇದ್ದೇನೆ... ಬ್ರೇಕ್ ಹೊಡೆಯಬೇಕು...!

**(ಸಂಗ್ರಹ)**